# ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 24/02/2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ:ಬಿ12(5)/ಪಿಆರ್/35/2020-21 ದಿನಾಂಕ:21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ಕಮಿಟಿಯ ಕಾರ್ಯದರ್ಶಿ, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

**ಈ ಕೆಳಕಂಡ ಅಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಡಿ.ಎಂ.ಮುನಿರೆಡ್ಡಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ:83, ಕಾಡುಗುಡಿ, ಬಿ.ಬಿ.ಎಂ.ಪಿ
4. ಡಾ॥ ಕಂತರಾಜು, ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
5. ಶ್ರೀ.ಮಂಜುನಾಥ್, ದ್ವಿತಿಯ ದರ್ಜೆ ಸಹಾಯಕ/ವರ್ಕ್ ಇನ್ಸ್‌ಪೆಕ್ಟರ್, ಕಾಡುಗುಡಿ ವಾರ್ಡ್ ನಂ.83
6. ಶ್ರೀ.ಅಂಜಿನಪ್ಪ, ಸಹಾಯಕ ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ.
7. ಶ್ರೀ.ಸುರೇಶ್, ಜೆ.ಇ. ಬೆಸ್ಕಾಂ
8. ಶ್ರೀ.ವಿ.ರವಿಚಂದ್ರ, ಎ.ಇ, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ
9. ಡಾ॥ ವಂದನಾ, ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
10. ಶ್ರೀ.ಕುಪೇಂದ್ರ, ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ,
11. ಶ್ರೀ.ಮನೋಜ್ ಕುಮಾರ್, ಕಂದಾಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ.83
12. ಶ್ರೀ.ಪಿ.ಸುದರ್ಶನ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
13. ಶ್ರೀ.ಶ್ರೀನಿವಾಸ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
14. ಶ್ರೀ.ವೆಂಕಟೇಶ್, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ
15. ಶ್ರೀ.ಹನುಮಂತಪ್ಪ, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು**

| | |
|---|---|
| 1. ಸಂದೀಪ್ ಅನಿರುಧ್ | 18. ನಾಗರಾಜ್ ರೆಡ್ಡಿ |
| 2. ಡಾ॥ ಸಾಯಿ ಕೀರ್ತಿ | 19. ಹನುಮಾನ ಬಾಬು |
| 3. ಪುರುಷೋತಮ್ | 20. ಸಂಪಂಗಿ |
| 4. ಜಗದೀಶ್ | 21. ಎಸ್.ಮಾರಪ್ಪ |
| 5. ಸಂದ್ಯಾ ಪ್ರಕಾಶ್ | 22. ಗವಾಸ್ಕರ್ ನಾಯ್ಕ್ |
| 6. ಪತಾಂಜಲಿ | 23. ಸುಮನ್ ಸೇನಾಪತಿ |
| 7. ಹರ್ಷ | 24. ಜಗದೀಶ್ವರಿ |
| 8. ಭಾಗ್ಯ | 25. ಮುನಿಲಕ್ಷ್ಮಿ |
| 9. ಶಿವಕುಮಾರ್ ಪಾಟೀಲ್ | 26. ಅನಿತ |
| 10. ವೆಂಕಟೇಶ್ ಗೌಡ | 27. ಮಂಜುಳ |
| 11. ಹರಿಪ್ರಸಾದ್ ರೆಡ್ಡಿ | 28. ಆನಂದ್ ಕುಮಾರ್ |
| 12. ಪಿ.ಜೆ.ವೇಲು | 29. ಗೌತಮ್ ಮಿಶ್ರ |
| 13. ನಾರಾಯಣ್ ರೆಡ್ಡಿ | 30. ಎನ್.ಎಂ.ಗೋಪಾಲ್ |
| 14. ರವಿ-ಗುಟ್ಟ | 31. ದಿಲೀಪ್ |
| 15. ಗೋಪಾಲ್ ಗುಟ್ಟ | 32. ಪ್ರಮೀಳ |
| 16. ರವಿ-ಕೇಬಲ್ | |
| 17. ವಿನೋದ್ ಕುಮಾರ್ | |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಕಮಿಟಿಯ ಕಾರ್ಯದರ್ಶಿಗಳು, ಹಿರಿಯ ಆರೋಗ್ಯ ನಿರೀಕ್ಷಕರು, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಹಿರಿಯ ಆರೋಗ್ಯ ನಿರೀಕ್ಷಕರು ಸ್ವಾಗತಾ ಕೋರಿದ ನಂತರ ನೋಡಲ್ ಅಧಿಕಾರಿಗಳು ಕಲಾಪವನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

2. ಸಭೆಯಲ್ಲಿ ಸಾರ್ವಜನಿಕರು ರವರು ಡಿ-ಸಿಲ್ವಾ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ರಸ್ತೆ ಆಗೆದಿರುದನ್ನು ಪೂರ್ಣನಿರ್ಮಿಸಲು ಕೋರಿದರು, ಸದರಿ ವಿಷಯಕ್ಕೆ ಶ್ರೀ. ನವೀನ್, ಸ.ಅ ಕಾಮಗಾರಿಯು ಪ್ರಗತಿಯಲ್ಲಿದ್ದು, ಇನ್ನೂ ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳುವುದಾಗಿ ತಿಳಿಸಿದರು.

3. ಸಭೆಯಲ್ಲಿ ಸಾರ್ವಜನಿಕರು ಅಂಬೇಡ್ಕರ್‌ಗುಟ್ಟ ಪ್ರದೇಶದಲ್ಲಿ ನೀರಿನ್ನು 02 ವಾರಕ್ಕೆ ಒಮ್ಮೆ ಬಿಡಲಾಗುತ್ತಿದೆ ಎಂಬುವುದರ ಬಗ್ಗೆ ದೂರನ್ನು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯಲ್ಲಿ ಶ್ರೀ. ನವೀನ್, ಸಹಾಯಕ ಅಭಿಯಂತರರು ರವರು ದೂರವಾಣಿ ಮುಖಾಂತರ ಬೂಸ್ಟರ್ ಮೋಟಾರನ್ನು ಈಗಾಗಲೇ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಮುಗಿದ ನಂತರ ನೀರಿನ ಒಳಹರಿವನ್ನು ಹೆಚ್ಚಿಸುವುದಾಗಿ ತಿಳಿಸಿದರು.

4. ಸಭೆಯಲ್ಲಿ ಸಾರ್ವಜನಿಕರು ಎ.ಬಿ ವಾಜುಪೈಯಿ ರಸ್ತೆಯಲ್ಲಿ, ರಸ್ತೆಯು ಹದಗೆಟ್ಟಿದ್ದು, ಕೂಡಲೇ ರಸ್ತೆ ಕಾಮಗಾರಿಯನ್ನು ಕೈಗೊಂಡು, ರಸ್ತೆಗಳನ್ನು ಸರಿಪಡಿಸಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ರವಿಚಂದ್ರನ್, ಸ.ಅ, ರವರು ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕೂಡಲೇ ಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಿದರು.

5. ಸಭೆಯಲ್ಲಿ ಶ್ರೀ.ಪುರುಷೋತಮ್, ಪ್ರಶಾಂತ್ ಬಡಾವಣೆ ರವರು ಪ್ರಶಾಂತ್ ಬಡಾವಣೆಯಲ್ಲಿ ಬೆಸ್ಕಾಂ ವತಿಯಿಂದ ಅಗೆದಿರುವ ರಸ್ತೆಗಳನ್ನು ಪನರ್ ನಿರ್ಮಾಣ ಮಾಡಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ನವೀನ್ ರವರು ದೂರವಾಣಿ ಮುಖಾಂತರ ವೆಟ್‌ಮಿಕ್ಸ್‌ನ್ನು ಕೂಡಲೇ ಹರಡಿಸುವುದಾಗಿ ತಿಳಿಸಿದರು.

6. ಸಭೆಯಲ್ಲಿ ಸಾರ್ವನಿಕರು ಮುಖ್ಯರಸ್ತೆಗಳಲ್ಲಿ ಮಣ್ಣಿನ ದೂಳು ತುಂಬಿಕೊಂಡಿದ್ದು, ಇದನ್ನು ತೆರವುಗೊಳಿಸಲು ಕೋರಿದರು ಸದರಿ ವಿಷಯಕ್ಕೆ ಸಂಬಂದಿಸಿದಂತೆ ವಾರ್ಡ್ ಕಾರ್ಯದರ್ಶಿಗಳು ಕಿರಿಯ ಆರೋಗ್ಯಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

7. ಸಭೆಯಲ್ಲಿ ಸಾರ್ವಜನಿಕರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಶೀಘ್ರದಲ್ಲಿ ಪೂರ್ಣಗೊಳಿಸಲು ಕೋರಿದರು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಹಾಯಕ ಅಭಿಯಂತರರು, ಕಾಮಗಾರಿಗಳು ಟೆಂಡರ್ ಪ್ರಕ್ರೀಯೆಯು ಪ್ರಗತಿಯಲ್ಲಿ ಇದ್ದು, ಸದರಿ ಕಾಮಗಾರಿಗಳನ್ನ ಶಿಘ್ರದಲ್ಲಿಯೇ ನಿರ್ವಹಿಸುವುದಾಗಿ ತಿಳಿಸಿದರು.

8. ಸಭೆಯಲ್ಲಿ ಎ.ಕೆ.ಜಿ ಕಾಲೋನಿಯ ಬಳಿ ಇರುವ ಪಾಲಿಟೇಕ್ನಿಕ್ ಕಾಲೇಜ್‌ನಲ್ಲಿ ರಾತ್ರಿಯ ಸಮಯದಲ್ಲಿ ಕೆಲವು ದ್ರುಷ್ಕರ್ಮಿ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು, ಸದರಿ ವಿಷಯಕ್ಕೆ ಸಹಾಯಕ ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ. ರವರು ರಾತ್ರಿ ಬಿಟ್‌ನ್ನು ಸ್ಥಳಕ್ಕೆ ಕಳುಹಿಸುವುದಾಗಿ ತಿಳಿಸಿದರು.

9. ಸಭೆಯಲ್ಲಿ ಸಾರ್ವಜನಿಕರು, ನೀರಿನ ಅಭಾವ ಮುಂದಿನ ದಿನಗಳಲ್ಲಿ ಹೆಚ್ಚಾಗುವುದರಿಂದ, ಕೂಡಲೇ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯುವ ಬಗ್ಗೆ ಕೋರಿದರು. ಸದರಿ ವಿಷಯಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದ ಕೂಡಲೇ ಬೋರ್‌ವೆಲ್ ಕೊರೆಯುವುದಾಗಿ ತಿಳಿಸಿದರು.

10. ವಾರ್ಡ್ ನಂ.83ರ ಒಂಟಿ ಮನೆ ಸಂಬಂಧಿಸಿದಂತೆ, ಈಗಾಗಲೇ ನಿವೇಶಗಳಿರುವ ಫಲಾನುಭವಿಗಳ ಹೆಸರಿರುವ ಅರ್ಜಿಗಳನ್ನು ತಮ್ಮ ಕಛೇರಿಗೆ ಸಲ್ಲಿಸಿದ್ದು, ಅದರ ಬಗ್ಗೆ ಮಾಹಿತಿ ನೀಡುವ ಬಗ್ಗೆ ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ ಅಭಿಯಂತರರು, 2020-21 ಮತ್ತು 2021-22ರ ಅನುದಾವು ಸರ್ಕಾರದಿಂದ ಬಂದಲ್ಲಿ, ಕೂಡಲೇ ಫಲಾನುಭವಿಗಳ ಆಯ್ಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24/2/2022

**(ಎನ್.ವೆಂಕಟೇಶ್)**
**ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ**
**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ